ಕತೆ

# ಬಿಸಿಲುಕೋಲು



**ಸದಾಶಿವ್ ಸೊರಟೂರು**

ಕಲೆ: ಮುರಳೀಧರ ರಾಠೋಡ್

ಮುರಿದ ಕದಗಳಿರುವ ಕಿಟಕಿಯಿಂದ ಗಾಳಿ, ಬೆಳಕು ಅನಾಯಾಸವಾಗಿ ರೂಮಿನೊಳಗೆ ನುಗ್ಗಿದವು. ಎಳೆಯ ಬಿಸಿಲು ರೂಮಿನೊಳಗೆ ಬಾಲಿಶ ಬಿಸಿಲುಕೋಲುಗಳನ್ನು ಮೂಡಿಸಿತ್ತು. ಬಿಸಿಲು, ಕಿಟಕಿ ಸರಳುಗಳಿಗೆ ಎಡವಿ ಎಡವಿ ರೂಮಿನುದ್ದಕ್ಕೂ ಸಮಾನಾಂತರ ಗೆರೆಗಳನ್ನು ಕೊರೆದಿತ್ತು. ಆ ಬಿಸಿಲ ಗೆರೆಗಳನ್ನು ಹಿಡಿಯುವಂತೆ ಆಡುತ್ತಾ ಪರಸು ಕೂತಿದ್ದ. ಮೂರನೇ ತರಗತಿಯ ಒಂಬತ್ತನೆಯ ವಯಸ್ಸಿನ ಪರಸು ಯಾವುದೋ ವಿಚಿತ್ರ ಲಹರಿಯಲ್ಲಿರುವಂತೆ ತೋರುತ್ತಿದ್ದ.

ಅವನು ತೊಟ್ಟಿದ್ದ ಕಡುನೀಲಿಯ ಚಡ್ಡಿ ಹಿಂದೆ ಅಂಗೈಅಗಲದಷ್ಟು ಹರಿದಿತ್ತು. ಕಡುನೀಲಿಗೆ ಅವನ ಅವ್ವ ಸೇರಿಸಿ ಹೊಲಿದ ಬಟ್ಟೆಯ ತುಣುಕು ಯಾವ ರೀತಿಯಲ್ಲೂ ಹೋಲುತ್ತಿರಲಿಲ್ಲ. ಕೈಯಲ್ಲಿ ಹಾಕಿದ್ದ ದಪ್ಪದಪ್ಪನೆಯ ಹೊಲಿಗೆಗಳು ಬಡತನಕ್ಕೆ ಹಾಕಿದ ಕಸೂತಿಯಂತಿದ್ದವು. ಆ ತೇಪೆ ಒಂದು ವಿಚಿತ್ರ ಮರ್ಯಾದೆಯ ರಕ್ಷಕನಾಗಿ ಕಾಣುತ್ತಿತ್ತು. ಅವನ ಅವ್ವ ಹರಿದ ಜಾಗಕ್ಕೆ ಹೊಲಿದು ತೊಡಿಸಿದ್ದ ಅಂಗೈಅಗಲದ ತೇಪೆ ಮಗನನ್ನು ಮರ್ಯಾದೆಯ ಜಗತ್ತಿನಿಂದ ಪಾರು ಮಾಡಲು ತೊಟ್ಟ ಹಟದಂತಿತ್ತು. ಬೆಳಗ್ಗೆಯಷ್ಟೆ ತೊಟ್ಟ ತಿಳಿನೀಲಿ ಬಣ್ಣದ ಅಂಗಿಯ ತೋಳಿನ ಎರಡೂ ಬದಿಗೂ ಆಗಲೆ ಸಣ್ಣ ಕರಿಕಲೆಗಳು ಮೂಡತೊಡಗಿದ್ದವು. ಸೋರುವ ಮೂಗನ್ನು, ಬೆವರನ್ನು, ದೂಳನ್ನು ಕೈಯ ಸಹಾಯ ಕೋರದೆ ತೋಳುಗಳಿಗೆ ಅವನ್ನು ಒಪ್ಪಿಸಿ ಒಂದ್ಹೊತ್ತು ಕ್ಷಣ ಸೋರುವ ಮೂಗಿನಿಂದ, ಬೆವರಿನಿಂದ ಬಿಡುಗಡೆ ಪಡೆಯುತ್ತಿದ್ದ. ಈ ಪ್ರಕ್ರಿಯೆ ಅವನ ತೋಳಗಳ ಮೇಲೆ ಕಪ್ಪುಕಲೆಯನ್ನು ದಯಪಾಲಿಸಿತ್ತು. ಇನ್ನೆರಡು ದಿನ ಕಳೆದರೆ ಕಲೆಗಳು ಬೆಳೆದು ದೊಡ್ಡವುಗಳಾಗಿ ಚಕ್ಕಳಕ್ಕೆ ಬದಲಾಗುವುದನ್ನು ನೀವು ನೋಡಬಹುದಿತ್ತು.

ಎಲ್ಲರನ್ನು ಒಂದೇ ಕೊಠಡಿಯಲಿ ಕೂಡಿ ಹಾಕಲಾಗಿತ್ತು. ಏಳೂ ತರಗತಿಯ ಮಕ್ಕಳನ್ನು ಒಂದು ಕಾರ್ಯಕ್ರಮದ ನೆಪದಲ್ಲಿ ಬಂಧಿಸಲಾಗಿತ್ತು. ಮಕ್ಕಳ ಗುಜುಗುಜು ನಡುಮುಂಜಾನೆಯ ಹಕ್ಕಿಗಳ ಸಂಗೀತ ಕಛೇರಿಯನ್ನು ನೆನಪಿಸುವಂತಿತ್ತು. ದೊಡ್ಡಮಕ್ಕಳು ಅವಸರವನ್ನು ತೊಟ್ಟು ಸರಬರ ಓಡಾಡುತ್ತಿದ್ದರು. ಕಪ್ಪುಹಲಗೆಯ ಬಳಿ ಸಾಲಾಗಿ ಕುರ್ಚಿಗಳನ್ನು ಜೋಡಿಸುತ್ತಿದ್ದರು. ಅದೇ ಕಪ್ಪುಹಲಗೆಯ ಮೇಲೆ ಅದೀಗ ತಾನೆ ಬರೆದ ದೊಡ್ಡ ಅಕ್ಷರದ ಸಾಲೊಂದು ಇನ್ನೂ ಬಿಸಿಬಿಸಿಯಾಗಿಯೇ ಇತ್ತು. ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಓಡಾಡುತ್ತಿದ್ದ ತನ್ನದೇ ಬೀದಿಯ ಅಣ್ಣಂದಿರ ಅರ್ಥವಾಗದ ಗಡಿಬಿಡಿಯನ್ನು ಅನ್ಯಭಾಷೆಯ ಸಿನಿಮಾ ನೋಡುವಂತೆ ನೋಡುತ್ತಿದ್ದ ಪರಸು. ಏನೊಂದೂ ಅರ್ಥವಾಗದೆ ಒಮ್ಮೆ ಅವರ